
# ಕವಿತೆಯ ಮಾತು



ನಸುಕಿನಲಿ ನನ್ನೊಂದಿಗೆ
ಮಾತಿಗೆ ಕೂರುವ ಕವಿತೆಗೆ
ಸದಾ ಹರಾಜು
ಕೂಗುವ ತವಕ.
ನಾನು ಮಹಾಮೌನಿ
ಬಡಿದೆಬ್ಬಿಸಿದರೂ ಸರಿದಾಡದ
ಯಾವ ಸದ್ದಿಗೂ ಬೆಚ್ಚದ
ಬೋಧಗಯಾದ ತಥಾಗತನಂತೆ,
ರಕ್ತ ಒಸರಿದರೂ ಗೊತ್ತೇ ಆಗದ
ತುಂಬು ಹರೆಯದ ಲಾಮಾಗಳ
ಕೆಂಪು ಬಟ್ಟೆಯಂತೆ.

ಕವಿತೆ ಹಟವಾದಿ
ಕಬ್ಬಿಣದ ಗೊಲಸು ತೊಡಿಸಿ
ಬಿಗಿದು ಕೂರಿಸಿದ ಎದೆಗೆ
ಮತ್ತೆ-ಮತ್ತೆ ಕಾರಂಜಿಯ
ಹಿಗ್ಗು ಹೊದೆಸುವ ಛಲವಾದಿ,
ತಪ್ಪಿಯೂ ತಿರುಗದೆ
ಪಕ್ಕದಲ್ಲಿ ಕುಳಿತು
ಕಾರು ಓಡಿಸುವ ಗೆಳೆಯನ
ಕೆನ್ನೆ ಮೇಲೆಯೇ ಕುಳಿತು ನನ್ನ
ಫಸಗಿ ಬೀಳಿಸುವ ಹುನ್ನಾರು ಅದಕೆ.

ಕೋಗಿಲೆಯ ಕುಕಿಲು-ಕೂಗಿ
ಮಾರುತ್ತರಕ್ಕಾಗಿ ಕಾದಂತೆ
ಕಾಯುವ ಕವಿತೆಯ ಕಂಡರೆ
ಯಾಕೋ ಅಕ್ಕರೆ ನನಗೆ.

ಈಚೆಗೆ
ಒಳಗೇ ಇದ ಹಮ್ಮು ಹೊರಕಳಿಸಿ
ನಾನೂ ಮಾತಿಗೆ ಕೂರುತ್ತೇನೆ
ಒಮ್ಮೊಮ್ಮೆ ಕವಿತೆಯೊಡನೆ
ಮುಸ್ಸಂಜೆಗೆ...

● ರೇಣುಕಾ ರಮಾನಂದ ಶೆಟಗೇರಿ